

## ಮಕ್ಕಳೇ ಆಸ್ತಿಯಾಗಬೇಕಾದರೆ

ನ. 21 ರ ಸಂಚಿಕೆಯಲ್ಲಿ ಕೋಡಿಬೆಟ್ಟು ರಾಜಲಕ್ಷ್ಮಿ ಅವರ 'ಗಂಡ ಹೆಂಡತಿ ಮುನಿಸು; ಮುರಿದೀತು ಮಕ್ಕಳ ಮನಸು' ಲೇಖನ ಚೆನ್ನಾಗಿತ್ತು. ಇತ್ತೀಚಿನ ದಿನಗಳಲ್ಲಿ ಪೋಷಕರಿಬ್ಬರೂ ನೌಕರಿಯಲ್ಲಿ ತೊಡಗಬೇಕಾಗಿದೆ. ಉದ್ಯೋಗದ ಒತ್ತಡದ ಪರಿಣಾಮ ಆಗುವುದು ಇಬ್ಬರ ಮೇಲೆಯೇ. ಈ ಹಿನ್ನೆಲೆಯಲ್ಲಿ, ಪೋಷಕರಿಗೆ ಮಕ್ಕಳ ದಿನಚರಿಯನ್ನು, ಬೆಳವಣಿಗೆಗಳನ್ನು, ಬೇಕುಬೇಡಗಳನ್ನು ಅವಲೋಕಿಸುವಲ್ಲಿ ಲೋಪವಾಗುವುದು ಸಹಜವೇ. ಹೆಚ್ಚಿನ ಹಣ ಗಳಿಕೆ ಇಂದಿನ ಸಮಸ್ಯೆ ಬಗೆಹರಿಸುವುದಾದರೂ ಮುಂದಿನ ದಿನಗಳಲ್ಲಿನ ವಿಪರ್ಯಾಸಗಳನ್ನು ಅರಿಯುವ ಸಾಮರ್ಥ್ಯ ಪೋಷಕರಿಗಿದ್ದರೆ ಚೆನ್ನ.

—ರಾಜೀವ್ ಎನ್. ಮಾಗಲ್, ಸಕಲೇಶಪುರ

ನ. 21ರ ಸಂಚಿಕೆಯಲ್ಲಿ ಗಂಡ ಹೆಂಡತಿ ಮುನಿಸಿನ ಬಗೆಗಿನ ಲೇಖನ ಮನತಟ್ಟಿತು. ನಾನು ಎಷ್ಟೇ ಹೊಂದಿಕೊಂಡು ಹೋದರೂ, ತನ್ನ ಎರಡನೇ ಸಂಬಂಧವನ್ನು ಬಿಡಲು ಇಚ್ಛಿಸದ ನನ್ನ ಪತಿಯಿಂದ ವಿಚ್ಛೇದನ ಪಡೆದುಕೊಂಡಾಯ್ತು. ನನ್ನ ಮಗ ಬಿ.ಇ. ಎರಡನೇ ವರ್ಷದಲ್ಲಿ ಓದುತ್ತಿದ್ದ. ಮಗನ ಜೊತೆ ಮಾತ್ರ ತಂದೆ ಮಾತಾಡುತ್ತಿದ್ದರು. ನಾನು ಸುಮ್ಮನಿದ್ದೆ. ಆದರೆ ಮಗ ಆಸೆಪಟ್ಟನೆಂದು ಮುಂದೆ ಓದಲು, ಅವನನ್ನು ಅಮೆರಿಕೆಗೆ ಕಳುಹಿಸಲು ಒಪ್ಪಿಕೊಂಡೆ. ಮಗ 'ಅಪ್ಪನಿಗೆ ನಾನು ಹೇಳುವುದಿಲ್ಲ, ನೀನು ಕೂಡ ಯಾರಿಂದಲೂ ತಿಳಿಯುವಂತೆ ಮಾಡಬಾರದು' ಎಂದು ನನ್ನ ಹತ್ತಿರ ಮಾತು ತೆಗೆದುಕೊಂಡ. ಈಗ ನಾನು ಅಸಹಾಯಕಳಾಗಿ ಸುಮ್ಮನಿದ್ದೇನೆ. ಒಂದೊಂದು ಬಾರಿ ನನ್ನ ತಪ್ಪಿನಿಂದ ನನ್ನ ಮಗ ತಂದೆಯ ಪ್ರೀತಿಯಿಂದ ವಂಚಿತನಾದನೇನೋ ಎಂದು ದುಃಖವಾಗುತ್ತದೆ.

—ಸುಧಾ, ಬೆಂಗಳೂರು

## ಅಪಸ್ಮಾರ: ಆತಂಕ ಬೇಡ

ನ. 21ರ ಸಂಚಿಕೆಯಲ್ಲಿ ಲೇಖಕಿ ಉಮಾ ಅನಂತ್ ಅವರು ಬರೆದ 'ಅಪಸ್ಮಾರ: ಆತಂಕ ಬೇಡ' ಲೇಖನ ಓದಿದೆ. ಲೇಖಕಿ ಚಿಕಿತ್ಸೆ ಬಗ್ಗೆ ಬರೆಯುತ್ತಾ, ತಪಾಸಣೆಗಳನ್ನು ಬರೆದಿದ್ದಾರೆ! ತಪಾಸಣೆಗಳು ಚಿಕಿತ್ಸೆ ಅಲ್ಲ. ಬಹುತೇಕ ರೋಗಿಗಳಲ್ಲಿ ಮಾಡಿದ ತಪಾಸಣೆಗಳು ನಾರ್ಮಲ್ ಇರುತ್ತವೆ! ಅಪಸ್ಮಾರಕ್ಕೆ ಪರಿಣಾಮಕಾರಿ ಔಷಧಿಗಳಿವೆ. ಫೇನೋಬಾರ್ಬಿಟೋನ್‌ನಿಂದ ಹಿಡಿದು ಫೆನಿಟಾಯಿನ್, ವಾಲ್ಪ್ರೋಯಿಕ್‌ಆಸಿಡ್, ಕ್ಲೋಬಜಾಮ್, ಕಾರ್ಬಮಜೆಪಿನ್ ಇತ್ಯಾದಿ. ವೈದ್ಯರ ಮಾರ್ಗದರ್ಶನದಲ್ಲಿ 3 ರಿಂದ 5 ವರ್ಷಗಳ ಕಾಲ, ತಪ್ಪದೆ ಔಷಧ ಸೇವಿಸಬೇಕು. ಅಪಸ್ಮಾರ ವಾಸಿಯಾಗುವಂತಹ ಕಾಯಿಲೆ. ಜನರಿಗೆ ಮಾಹಿತಿ ನೀಡುವ ಲೇಖನಗಳು ಅಪೂರ್ಣವಾಗಬಾರದು, ತಪ್ಪು ಮಾಹಿತಿಗಳಿರಬಾರದು. ತಜ್ಞರನ್ನು ಕೇಳಿ ಬರೆಯುವುದು ಕ್ಷೇಮ.

—ಡಾ. ಸಿ.ಆರ್. ಚಂದ್ರಶೇಖರ್, ಬೆಂಗಳೂರು

'ಅಪಸ್ಮಾರ ಆತಂಕ ಬೇಡ' ಲೇಖನದ ಬಗ್ಗೆ ನನ್ನ ಕೆಲವು ಅನಿಸಿಕೆಗಳನ್ನು ತಿಳಿಸುತ್ತಿದ್ದೇನೆ. ಲೇಖನದಲ್ಲಿ ಹಾಕಿರುವ ಚಿತ್ರಗಳಿಗೂ ವಿಷಯಕ್ಕೂ ಸಂಬಂಧವಿಲ್ಲ. ಅಪಸ್ಮಾರ ಹಾಗೂ 'ಸಿಂಕೋಪ್' ಬೇರೆ ಬೇರೆ ಕಾಯಿಲೆಗಳು. ಸಿಂಕೋಪ್ ಅನ್ನು ಅಪಸ್ಮಾರ ಎಂದು ಪರಿಗಣಿಸುವುದಿಲ್ಲ. ಹೃದ್ರೋಗದಿಂದ ಬರುವ ಪ್ರಜ್ಞಾಶೂನ್ಯತೆಯನ್ನು 'ಕಾರ್ಡಿಯಾಕ್ ಸಿಂಕೋಪ್' ಎಂದು ಗುರುತಿಸಲ್ಪಡುತ್ತದೆ. ಇದನ್ನು ಅಪಸ್ಮಾರ ಎಂದು ಪರಿಗಣಿಸುವುದಿಲ್ಲ. ಇ.ಸಿ. ಜಿ ಹೃದ್ರೋಗ ಸಂಬಂಧ ಕಾಯಿಲೆಗೆ ಮಾಡಿಸುವ ಪರೀಕ್ಷೆ ಅಪಸ್ಮಾರಕ್ಕಲ್ಲ. ಅಪಸ್ಮಾರ ಬಂದರೆ ಅದೇ ಮುಂದೆ ಹೃದ್ರೋಗ ಸಮಸ್ಯೆಗೂ ನಾಂದಿ ಹಾಡಬಹುದು ಇದು ಸತ್ಯವಲ್ಲ.

—ಡಾ.ಎ. ಶಿವರಾಮಕೃಷ್ಣ, ಶಿವಮೊಗ್ಗ

## ಕೆ.ಆರ್. ಸ್ವಾಮಿ ನೆನಕೆ

ಅ. 31ರ ಸಂಚಿಕೆಯಲ್ಲಿ ವ್ಯಂಗ್ಯಚಿತ್ರಕಾರ ಕೆ. ಆರ್. ಸ್ವಾಮಿ ಕುರಿತ ಲೇಖನ ಓದಿದೆ. ಅವರು ದಾವಣಗೆರೆಯಲ್ಲಿ ನನ್ನ ಸಹಪಾಠಿ. ಅವರ ಪ್ರಥಮ ವ್ಯಂಗ್ಯಚಿತ್ರ 'ಸುಧಾ'ದಲ್ಲಿ ಪ್ರಕಟವಾಗಿದ್ದು 58 ವರ್ಷಗಳ ಹಿಂದೆ. ಆಗ ನಾವು ಒಟ್ಟಿಗೆ ಓದುತ್ತಿದ್ದೆವು. ಕಳೆದ 50 ವರ್ಷಗಳಿಂದ ನಾನು ಕರ್ನಾಟಕದಿಂದ ಹೊರಗಿದ್ದೀನಿ. ಆದ್ದರಿಂದ ಅವರ ಜೊತೆ ಸಂಪರ್ಕ ಇಲ್ಲ. ಈಗ ಹಳೆಯ ನೆನಪುಗಳು ಮರುಕಳಿಸಿತು.

—ಡಾ. ಕೆ.ಎಸ್. ರಾಘವನ್, ಸಿಕಂದರಾಬಾದ್

## ಹೆತ್ತವರ ಕನವರಿಕೆ

ನ.14ರ ಸಂಚಿಕೆಯಲ್ಲಿ ಪ್ರಕಟವಾದ ಉಮಾ ಅನಂತ್ ಅವರ 'ಮಕ್ಕಳ ನೆನಕೆಯಲ್ಲಿ ಹೆತ್ತವರ ಕನವರಿಕೆ' ಲೇಖನ ಅರ್ಥಪೂರ್ಣವಾಗಿದೆ. ನೂರಾರು ಮಂದಿ ವೃದ್ಧರ ಕಣ್ಣೀರ ಕಥೆಯಿದು. ಮುಂದಿನ ದಿನಗಳಲ್ಲಿ ವೃದ್ಧಾಪ್ಯವು ತಮಗೂ ಕಟ್ಟಿಟ್ಟ ಬುತ್ತಿ ಎನ್ನುವ ಕಟುಸತ್ಯವನ್ನು ಈಗಿನ ಯುವಪೀಳಿಗೆಗೆ ಜ್ಞಾಪಿಸುವಂತಿದೆ.

—ಶಶಿಕಲಾ ಆರ್. ಸ್ವಾಮಿ, ಬೆಂಗಳೂರು

## ಅರಿವು ಮೂಡಿಸುವ ಲೇಖನ



ನ. 21ರ ಸಂಚಿಕೆಯಲ್ಲಿ ಲಕ್ಷ್ಮಿನಾರಾಯಣ ಹೆಗಡೆ ಬರೆದ ವಿಧವಾ ವಿವಾಹದ ಕುರಿತ ಬರಹ ಓದಿದೆ. ಸಂಪ್ರದಾಯದ ಹೆಸರಿನಲ್ಲಿ ಮೌಢ್ಯ, ಬಾಲ್ಯ ವಿವಾಹಕ್ಕೆ ಬಲಿಯಾದವರ ಕುರಿತು ಹೇಳುವಾಗ ನೀಡಿರುವ 1921 ಮತ್ತು 1934ರಲ್ಲಿ ಇದ್ದ ಭಾರತೀಯ ವಿಧವೆಯರ ಸಂಖ್ಯೆಯನ್ನು ನೋಡಿದರೆ ಸ್ವಾತಂತ್ರ್ಯ ಪೂರ್ವದಲ್ಲಿ ಭಾರತೀಯ ಮಹಿಳೆಯರ ಸ್ಥಿತಿಗತಿಗಳು ಅರ್ಥವಾಗುತ್ತದೆ. ಅಂಥ ಸಂದರ್ಭದಲ್ಲೇ ಸ್ವತಃ ವಿಧವಾ ವಿವಾಹವಾಗಿ ಕ್ರಾಂತಿಕಾರಕ ಆಂದೋಲನಕ್ಕೆ ಮುನ್ನುಡಿ ಬರೆದ ಅಕದಾಸ ಗಣಪತಿ ಭಟ್ಟ ಮತ್ತು ಮಹಂಕಾಳಮ್ಮ ದಂಪತಿಗಳ ಕಾರ್ಯ ಮೆಚ್ಚುವಂತದ್ದು.

—ದೆಗ್ಗನಹಳ್ಳಿ ಆನಂದ್, ಕೆ. ಆರ್. ನಗರ

## ಸರೋವರದ ಸುಂದರ ಲೋಕ

ನ. 14ರ ಸಂಚಿಕೆಯಲ್ಲಿ ಪ್ರಕಟವಾದ ನಿರಂಜನ ವಾನಳ್ಳಿ ಅವರ 'ಸಪ್ತ ಸರೋವರ ಸುಂದರ ಲೋಕ' ಲೇಖನ ನಿಜಕ್ಕೂ ಉತ್ತಮವಾಗಿತ್ತು. ಮನಸ್ಸಿಗೆ ಹಿತವೆನಿಸಿತು. ನಾಗರಾಜ್ ಚಟ್ಟಳ್ಳಿ ಅವರ 'ಬಹುತ್ವ ಭಾರತದ ಹಕ್ಕಿಲೋಕ', ಹಕ್ಕಿಗಳ ವೈವಿಧ್ಯಮಯ ಬದುಕನ್ನು ಬಿಂಬಿಸುವ ಹಾಗಿತ್ತು.

—ವಿನಾಯಕ. ಆರ್., ರಾಯಚೂರು

## 'ಈ ಹೊತ್ತಿಗೆ' ಕಥಾ ಸ್ಪರ್ಧೆ

'ಈ ಹೊತ್ತಿಗೆ' ಸಂಸ್ಥೆಯು, 26ವರ್ಷ ಒಳಗಿನವರಿಗಾಗಿ ಕಥಾಸ್ಪರ್ಧೆಯನ್ನು ಆಯೋಜಿಸಿದೆ. ಜೊತೆಗೆ 'ಈ ಹೊತ್ತಿಗೆ ಕಥಾ ಪ್ರಶಸ್ತಿ'ಗಾಗಿ ಅಪ್ರಕಟಿತ ಕಥಾ ಸಂಕಲನವನ್ನೂ ಆಹ್ವಾನಿಸುತ್ತಿದೆ.

ಕಥಾ ಪ್ರಶಸ್ತಿಯು ₹ 10,000 ನಗದು ಬಹುಮಾನ ಒಳಗೊಂಡಿರುತ್ತದೆ. ಕಥಾ ಸಂಕಲನಗಳನ್ನು ಇಮೇಲ್ ಮೂಲಕ ಸ್ವೀಕರಿಲಾಗುವುದಿಲ್ಲ.

26 ವರ್ಷದೊಳಗಿನವರಿಗಾಗಿ ಕಥಾಸ್ಪರ್ಧೆ: ಮೊದಲನೆಯ ಬಹುಮಾನ: ₹ 5000 ಎರಡನೆಯ ಬಹುಮಾನ: ₹ 3000 ಮೂರನೆಯ ಬಹುಮಾನ: ₹ 2000 ಪದಮಿತಿ ಗರಿಷ್ಠ 2000 ಪದಗಳು. ವಯಸ್ಸಿನ ದೃಢೀಕರಣ ಪತ್ರ ಕಡ್ಡಾಯ. ವಿಳಾಸ: ehottige.ks@gmail.com ಸಂಕಲನ ಹಾಗೂ ಕಥೆ ತಲುಪಲು ಕೊನೆಯ ದಿನಾಂಕ: ಡಿಸೆಂಬರ್20, 2019. ವಿಳಾಸ: ಈ ಹೊತ್ತಿಗೆ, #65 , ಮುಗುಳ್ನಗೆ, 3ನೇ ಅಡ್ಡರಸ್ತೆ,ಪಿ.ಎನ್.ಬಿ. ನಗರ, ದೊಡ್ಡಕಲ್ಲಸಂದ್ರ, ಕೋಣನಕುಂಟೆ,ಬೆಂಗಳೂರು – 560062

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in